ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ ಇವರು
ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ

ಸೂಚನೆ:-

"ಕೋಲಾರ ಜಿಲ್ಲೆಯ ಮಾಲೂರ ತಾಲ್ಲೂಕಿನ ಬನಹಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯ ಗೂಂಡ್ಲಹಳ್ಳಿಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ 15 ಹೆಕ್ಟೇರ್ ಗೋಮಾಳ ಜಮೀನಿದ್ದು ಈ ಜಮೀನಿನಲ್ಲಿ 1995-96 ನೇ ಸಾಲಿನಲ್ಲಿ ಅರಣ್ಯ ಇಲಾಖೆಯವರು ವಿವಿಧ ಜಾತಿಯ ಅರಣ್ಯ ಮರಗಳನ್ನು ನೆಟ್ಟು 3 ವರ್ಷಗಳ ಕಾಲ ಪೋಷಿಸಿ 1998 ರಲ್ಲಿ ಬನಹಳ್ಳಿ ಗ್ರಾಮ ಪಂಚಾಯಿತಿಗೆ ಮರಗಳನ್ನು ನಿರ್ವಹಣೆ ಮಾಡಲು ನೀಡಿರುತ್ತಾರೆ ಸದರಿ ಜಮೀನಿನಲ್ಲಿ ಕಾಲ ಕ್ರಮೇಣ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದು ಈ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಿ, ಸದರಿ ಗಣಿಗಾರಿಕೆ ನಡೆಸುತ್ತಿರುವ 15 ಹೆಕ್ಟೇರ್ ಗೋಮಾಳವನ್ನು ಸಂರಕ್ಷಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ".

ಹೇಳಿಕೆ:-

ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ ಬನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗೂಂಡ್ಲಹಳ್ಳಿ ಗ್ರಾಮವು ಮಜರೆ ಗ್ರಾಮವಾಗಿದ್ದು. ಯಾವುದೇ ಸರ್ವೆ ನಂಬರ್ ಜಮೀನು ಇರುವುದಿಲ್ಲ. ಸದರಿ ಟೇಕಲ್ ಹೋಬಳಿಯ ಗೂಂಡ್ಲಹಳ್ಳಿ ಗ್ರಾಮದಲ್ಲಿ ಯಾವುದೇ ಗಣಿಗಾರಿಕೆ ನಡೆಯುತ್ತಿರುವುದಿಲ್ಲ ಹಾಗೂ ಅರಣ್ಯ ಇಲಾಖೆಯವರಿಗೆ ವರ್ಗಾಯಿಸಿರುವುದಿಲ್ಲ.

ಆರ್‌ಡಿ 51 ಎಲ್‌ಜಿಕ್ಯೂ 2023

(ಆರ್. ಅಶೋಕ)
ಕಂದಾಯ ಸಚಿವರು